ದಿಃ 18-03-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲು ಶ್ರೀ. ಹೆಚ್.ಎಲ್.ವಿ ಜೆ.ಡಿ.ಆರ್ ಪರ ವಕೀಲರಿಂದಃ

ಜೆ.ಡಿ.ಆರ್ ನಂ. 2 ರಿಂದ 5, 7 ಎ, 10 ರಿಂದ 12 ರವರ ವಿರುದ್ಧ ಕ್ರಮ ಕೈಗೊಳ್ಳಿ ಎಂದು ಕೋರಿ ನನ್ನ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ. ಅಸಲು ದಾವೆ ಸಂಖ್ಯೆ 245/2011 ರಲ್ಲಿ ಜೆ.ಡಿ.ಆರ್ ನಂ. 7 ಎ ಮತ್ತು ಬಿ ರವರು ಪಕ್ಷಗಾರರಲ್ಲ ಎಂದರೆ ಸಾಕ್ಷಿ ಅವರ ತಂದೆ ಪಕ್ಷಗಾರರಾಗಿರುತ್ತಾರೆ ಎಂದು ನುಡಿಯುತ್ತಾರೆ. ಜೆ.ಡಿ.ಆರ್ ನಂ. 7 ಎ ಮತ್ತು ಬಿ ರವರ ತಂದೆ ಯಾವ ಇಸವಿಯಲ್ಲಿ ತೀರಿಕೊಂಡರು ಎಂಬುದು ನನಗೆ ಗೊತ್ತಿಲ್ಲ. ಸದರಿ ಅಸಲು ದಾವೆಯು ನಡೆಯುತ್ತಿದ್ದಾಗ ಜೆ.ಡಿ.ಆರ್ ನಂ. 7 ಎ ಮತ್ತು ಬಿ ರವರ ತಂದೆ ಗಂಗಪ್ಪರವರು ಬದುಕಿದ್ದರು. ಸರ್ವೆ ನಂ. 88 ರಲ್ಲಿ ಒಟ್ಟು 08 ಎಕರೆ 28 ಗುಂಟೆ ಜಮೀನು ಇದೆ ಎಂದರೆ ಸರಿ. ಸದರಿ 08 ಎಕರೆ 28 ಗುಂಟೆಯೂ ಸಹ ನನಗೆ ಮಂಜೂರಾಗಿರುತ್ತದೆ. ನನ್ನ ಹೆಸರಿನಲ್ಲಿ ಈಗ 7 ಎಕರೆ 15 ಗುಂಟೆ ಬರುತ್ತಿದೆ ಎಂದರೆ ಸರಿ. ಮೊದಲಿನಿಂದಲೂ ನನ್ನ ಹೆಸರಿನಲ್ಲಿ 7 ಎಕರೆ 15 ಗುಂಟೆ ಬರುತ್ತಿತ್ತು ಎಂದರೆ ಸರಿಯಲ್ಲ. ನನಗೆ 7 ಎಕರೆ 15 ಗುಂಟೆ ಮಾತ್ರ ಮಂಜೂರಾಗಿದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಖರಾಬು ಸಹ ಮಂಜೂರಾಗಿದೆ ಎಂದು ನುಡಿಯುತ್ತಾರೆ.

ಅಸಲು ದಾವೆ ಸಂಖ್ಯೆ 245/2011 ರಲ್ಲಿ ಖರಾಬು ಬಿಟ್ಟು 7 ಎಕರೆ 15 ಗುಂಟೆಗೆ ನಾನು ಹಕ್ಕುದಾರಳು ಎಂದು ನ್ಯಾಯಾಲಯವು ಅಂತಿಮ ತೀರ್ಪನ್ನು ನೀಡಿದೆ ಎಂದರೆ ಸರಿ. ಸರ್ವೆ ನಂ. 88 ರಲ್ಲಿ 20 ಗುಂಟೆ ಎ ಖರಾಬ ಹಾಗೂ 33 ಗುಂಟೆ ಬಿ ಖರಾಬ ಇರುತ್ತದೆ ಎಂದರೆ ಸರಿ. ಸದರಿ ಖರಾಬು ಜಾಗದಲ್ಲಿ ಸರ್ಕಾರಿ ಶಾಲೆ, ಅಂಗನವಾಡಿ, ವಾಟರ್ ಟ್ಯಾಂಕ್ ಮತ್ತು ಒಂದು ಪುಟ್ಟ ಗ್ರಾಮ ಹಲವಾರೂ ವರ್ಷಗಳಿಂದ ಇದೆ ಎಂದರೆ ಸಾಕ್ಷಿ ಅಂಗನವಾಡಿ ಇದೆ ಎಂದು ನುಡಿಯುತ್ತಾರೆ. ಸದರಿ ಖರಾಬು ಜಮೀನಿನಲ್ಲಿ 12 ಮನೆಗಳು ಇವೆ. ಸಾಕ್ಷಿಯು ಮುಂದುವರೆದು ಸದರಿ ಮನೆಗಳು ಖುಷ್ಕಿ ಜಮೀನಿನಲ್ಲಿ ಇದ್ದರೂ ಅವುಗಳು ಖರಾಬು ಜಮೀನಿನಲ್ಲಿವೆ ಎಂದು ಅವರು ಬರೆಸಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಖರಾಬು ಮತ್ತು ಹಿಡುವಳಿ ಜಮೀನು ಎಲ್ಲಿ ಬರುತ್ತದೆ ಎಂದು ಇಲ್ಲಿಯವರೆಗೆ ಸರ್ವೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಸರ್ವೆ ರಿಪೋರ್ಟ್ ಅನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿಲ್ಲ. ಸದರಿ ಗ್ರಾಮದ ಗ್ರಾಮಸ್ಥರು ಸರ್ಕಾರಿ ಅಧಿಕಾರಿಗಳಿಗೆ ಅರ್ಜಿಯನ್ನು ನೀಡಿ ಸರ್ವೆ ಮಾಡಿಸಲು ಮುಂದಾದಾಗ ನಾನು ಸರ್ವೆ ಮಾಡಲು ಅವಕಾಶ ನೀಡದೆ ಗಲಾಟೆ ಮಾಡಿದೆನು ಎಂದರೆ ಸರಿಯಲ್ಲ.

ನಾನು ಮಾಡಿಸಿದ್ದೇನೆ ಎಂದು ಹೇಳುವ ಸರ್ವೆ ರಿಪೋರ್ಟ್ ಅನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. ಸದರಿ ರಿಪೋರ್ಟ್ ಅನ್ನು ಹಾಜರುಪಡಿಸಿದರೆ ವಾಸ್ತವಾಂಶ ತಿಳಿದುಬರುತ್ತದೆ ಎಂಬ ಕಾರಣಕ್ಕಾಗಿ ಅದನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ಸದರಿ 12 ಮನಗಳಿಗೆ ಗ್ರಾಮ ಪಂಚಾಯಿತಿಯವರು ವಿದ್ಯುತ್ ಸಂಪರ್ಕ, ಬೀದಿ ದೀಪಗಳು, ಕುಡಿಯುವ ನೀರಿನ ವ್ಯವಸ್ಥೆ, ಚರಂಡಿಗಳು ಹಾಗೂ ಇತರೆ ಮೂಲಭೂತ ಸೌಕರ್ಯಗಳನ್ನು ಮಾಡಿಕೊಟ್ಟಿದ್ದಾರೆ ಎಂದರೆ ಸರಿ. ನಿಪಿ-4 ರಲ್ಲಿ ಕಾಣುವುದು ಹಳೇ

ಮನೆಯಾಗಿದ್ದು ಅದಕ್ಕೆ ಸುಣ್ಣ-ಬಣ್ಣವನ್ನು ಬಳೆದುಕೊಂಡು ಸೀಟ್ಗಳನ್ನು ಹಾಕಿಕೊಂಡಿದ್ದಾರೆ ಎಂದರೆ ಸಾಕ್ಷಿ ನಿಪಿ-4 ರಲ್ಲಿ ಕಾಣುವ ಮನೆಯು ಹೊಸದಾಗಿ ನಿರ್ಮಿಸಿರುವುದಾಗಿದೆ ಎಂದು ನುಡಿಯುತ್ತಾರೆ. ನಿಪಿ-2 ರಲ್ಲಿ ಕಾಣುವ ಮನೆಯು ಜೆ.ಡಿ.ಆರ್ ನಂ. 7 ಎ ರವರ ಮನೆಯಾಗಿರುತ್ತದೆ. ಸಾಕ್ಷಿಯು ಮುಂದುವರೆದು ಸದರಿ ನಿಪಿ-2 ರ ಛಾಯಾಚಿತ್ರವು ಹಳೆಯ ಛಾಯಾಚಿತ್ರವಾಗಿದೆ ಎಂದು ನುಡಿಯುತ್ತಾರೆ.

ಅಸಲು ದಾವೆ ಸಂಖ್ಯೆ 245/2011 ರಲ್ಲಿ ಹೊರಡಿಸಿರುವ ಅಂತಿಮ ಆದೇಶವನ್ನು ಜೆ.ಡಿ.ಆರ್ 7 ಎ ಮತ್ತು ಬಿ ರವರ ವಿರುದ್ಧ ಯಾವುದೇ ಆದೇಶವಿರುವುದಿಲ್ಲ ಎಂದರೆ ಸಾಕ್ಷಿ ಅವರ ತಂದೆಯ ವಿರುದ್ಧ ಆದೇಶವಿದೆ ಎಂದು ನುಡಿಯುತ್ತಾರೆ. ದಾವಾ ಸರ್ವೆ ನಂ. 88 ರಲ್ಲಿ ಸ್ವಲ್ಪ ಭಾಗವು ಖರಾಬು ಹಾಗೂ ಗ್ರಾಮಠಾಣಾ ವ್ಯಾಪ್ತಿಗೆ ಒಳಪಡುತ್ತದೆ ಎಂದು ಜೆ.ಡಿ.ಆರ್ ಗಳು ನನ್ನ ಮೇಲೆ ಅಸಲು ದಾವೆ ಸಂಖ್ಯೆ 27/2015 ರ ದಾವೆಯನ್ನು ಹೂಡಿದ್ದಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ಕೆಲವರು ಬಾರದ ಕಾರಣ ಅದು ವಜಾಗೊಂಡಿತ್ತು ಹಾಗೂ ಅದರ ಪುನರ್ ಸ್ಥಾಪನೆಗಾಗಿ ಮಿಸ್ 18/2022 ನ್ನು ಹೂಡಿರುತ್ತಾರೆ ಎಂದರೆ ಗೊತ್ತಿಲ್ಲ. ಸದರಿ ಮಿಸ್ 18/2022 ರಲ್ಲಿ ನಾನು ವಕೀಲರ ಮೂಖಾಂತರ ಹಾಜರಾಗಿದ್ದೇನೆ ಎಂದರೆ ಸರಿ. ಸದರಿ ಪ್ರಕರಣವು ಇಂದಿಗೂ ಚಾಲ್ತಿಯಲ್ಲಿದ್ದರೂ ಅದರ ವಿಚಾರ ಗೊತ್ತಿಲ್ಲವೆಂದು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಅಸಲು ದಾವೆ ಸಂಖ್ಯೆ 245/2011 ರಲ್ಲಿ ಮನೆಗಳನ್ನು ಮತ್ತು ಶಾಲೆ ಹಾಗೂ ಅಂಗನವಾಡಿಯನ್ನು ಬಿಡಿಸಿಕೊಡಬೇಕೆಂದು ಕಲ್ಲಿನಾಯಕನಹಳ್ಳಿಯ ಗ್ರಾಮಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯನ್ನು ಪ್ರತಿವಾದಿಯಾಗಿ ಸೇರಿಸಿದ್ದೆನು ಎಂದರೆ ಸರಿ. ಸದರಿ ಪಂಚಾಯಿತಿ ಅಭವೃದ್ಧಿ ಅಧಿಕಾರಿಯವರ ಮೇಲೆ ಹಾಗೂ ಇತರರ ಮೇಲೆ ಅಮಲ್ ಜಾರಿ ಸಂಖ್ಯೆ 7/2016 ರ ಪ್ರಕರಣವನ್ನು ಇದೇ ನ್ಯಾಯಾಲಯದ ಮುಂದೆ ಹೂಡಿದ್ದೆನು ಎಂದರೆ ಸರಿ. ಸದರಿ ಪ್ರಕರಣವು ದಿನಾಂಕ 04-08-2017 ರಂದು ವಜಾಗೊಂಡಿರುತ್ತದೆ ಎಂದರೆ ಸರಿ.

**(ಸಮಯದ ಅಭಾವ ಇರುವ ಕಾರಣ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-

ಪ್ರ.ಸಿ.ನ್ಯಾ.ಮತ್ತು ಜೆಎಂಎಫ್‌ಸಿ,

ಗೌರಿಬಿದನೂರು